# ಬಸ್ಸು ನಿಲ್ದಾಣದಲ್ಲಿ 'ಸಾಹಿತ್ಯ' ಪ್ರೇಮ

ಈಚೆಗೆ ಕಲಬುರ್ಗಿ ಸೆಂಟ್ರಲ್ ಬಸ್ಸು ನಿಲ್ದಾಣಕ್ಕೆ ಹೋಗಿದ್ದೆ. ಪ್ರವೇಶದ್ವಾರದ ಮೂಲಕ ಒಳಹೊಕ್ಕು ವಿಚಾರಣಾ ಕೌಂಟರ್ ಬಳಿ ಹೋದಾಗ ಎಡಭಾಗದಲ್ಲಿ ಚೌಕಟ್ಟು ಹಾಕಿದ ಭಾವಚಿತ್ರಗಳ ಸಾಲು ಗಮನಸೆಳೆಯಿತು.

ಪ್ರವೇಶ ದ್ವಾರದ ಒಳ ಮೇಲ್ಭಾಗದ ಗೋಡೆಯಲ್ಲಿ ಅಚ್ಚುಕಟ್ಟಾಗಿ ಕನ್ನಡದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿಗಳ ಫೋಟೊಗಳನ್ನು ಹಾಕಲಾಗಿತ್ತು. ಅವುಗಳಿಗೆ ಮಣಿಹಾರದ ಗೌರವಾರ್ಪಣೆಯೊಂದಿಗೆ ಪ್ರತಿ ಭಾವಚಿತ್ರದ ಕೆಳಗೆ ಕುವೆಂಪುರವರಿಂದ ಕಂಬಾರರವರೆಗೆ ಆಯಾ ಸಾಹಿತಿಯ ಹೆಸರು, ಪ್ರಶಸ್ತಿ ತಂದುಕೊಟ್ಟ ಕೃತಿಯ ಹೆಸರು ಮತ್ತು ಪ್ರಶಸ್ತಿ ಲಭಿಸಿದ ಇಸವಿಯನ್ನೂ ನಮೂದಿಸಲಾಗಿದೆ.

ಮಾತ್ರವಲ್ಲದೆ ಅಲ್ಲಿಂದಾರಂಭಿಸಿ ಪ್ರಯಾಣಿಕರು ಕಾಯುವ ಲಾಂಜಿನವರೆಗೆ ಮೇಲ್ಛಾವಣಿಯ ಪ್ರತಿ ಜಂತಿಯ ಮೇಲೂ, ಜಂತಿಗೆ ಮೂರರಂತೆ 'ಮಾನವನ ಘನತೆಯೆಂಬುದು ಶ್ರಮದಲ್ಲಿದೆ' ಎಂಬಂತಹ ಹಲವಾರು ಕನ್ನಡ ಸೂಕ್ತಿಗಳನ್ನೂ, 'ಇಟ್ಟದ್ದು ಕೊಳೆಯುತ್ತದೆ, ಕೊಟ್ಟದ್ದು ಬೆಳೆಯುತ್ತದೆ'






# ನಿರ್ಮಾಲ್ಯ ಕಲಶ



ಹಿಂದಿನಿಂದಲೂ ದಿನನಿತ್ಯ ದೇವರ ಪೂಜೆಯಲ್ಲಿ ಬಳಸಿದ ಹೂವು, ಹಾರಾದಿಗಳನ್ನು ಮರುದಿನ ವಿಸರ್ಜಿಸುವ ಪರಿಪಾಟವನ್ನೇ ಅನುಸರಿಸುತ್ತಿದ್ದೇವೆ. ಇದನ್ನು ದೇವರ ನಿರ್ಮಾಲ್ಯ ವಿಸರ್ಜನೆ ಎಂದು ಕರೆಯಲಾಗುತ್ತದೆ. ಒಟ್ಟುಗೂಡಿಸಿದ ಪೂಜಾ ಸಾಮಗ್ರಿಗಳನ್ನು ವಾರಕ್ಕೊಮ್ಮೆ ಅಥವಾ ಹತ್ತು ದಿನಗಳಿಗೊಮ್ಮೆ ಹರಿಯುವ ನದಿಯಲ್ಲಿ ತ್ಯಜಿಸುವ ದೃಶ್ಯಗಳು ಸಾಮಾನ್ಯವಾಗಿ ಎಲ್ಲೆಡೆ ಕಂಡುಬರುತ್ತವೆ. ಆದರೆ, ಇದರಿಂದ ನದಿ ನೀರಿನ ಮಾಲಿನ್ಯ ಹೆಚ್ಚುವುದು, ಜಲಜೀವಿಗಳ ಮೇಲೆ ದುಷ್ಪರಿಣಾಮ ಬೀರುವುದು ಹಾಗೂ ಪರಿಸರದ ಸಮತೋಲನ ಹದಗೆಡುವಂತಹ ಅನಾಹುತಗಳು ಸಂಭವಿಸುತ್ತವೆ.

ಈಚೆಗೆ, ಗುಜರಾತ್‌ನ ಅಹ್ಮದಾಬಾದ್‌ನಲ್ಲಿರುವ ಸಬರಮತಿ ಆಶ್ರಮದ ಸಮೀಪ ಪ್ರಯಾಣಿಸುತ್ತಿದ್ದಾಗ, ಚಿನ್ನದಂತೆ ಹೊಳೆಯುವ ಆಕರ್ಷಕ, ಆಳೆತ್ತರದ ಕಳಶ ರಸ್ತೆಬದಿಯಲ್ಲಿ ಗಮನಸೆಳೆಯಿತು. ಕುತೂಹಲದಿಂದ ಹತ್ತಿರ ಹೋಗಿ ನೋಡಿದಾಗ, ಅದು ಗಾಂಧೀನಗರ ಪೌರಾಡಳಿತದ ವತಿಯಿಂದ ಸಬರಮತಿ ನದಿಯ ದಡದಲ್ಲಿ ಸ್ಥಾಪಿಸಲಾದ 'ನಿರ್ಮಾಲ್ಯ ಕಲಶ' ಎಂಬುದಾಗಿ ತಿಳಿಯಿತು.

ಭಕ್ತರು ಪೂಜಾ ಸಾಮಗ್ರಿಗಳನ್ನು ನದಿಯಲ್ಲಿ ವಿಸರ್ಜಿಸುವುದನ್ನು ತಡೆಯಲು ಈ ಕಲಶವನ್ನು ಇಲ್ಲಿ ಇಡಲಾಗಿದೆ. ಇದರಿಂದ ನದಿಯ ನೀರಿನ ಶುದ್ಧತೆ ಕಾಪಾಡಿದಂತಾಗುತ್ತದೆ. ಜೊತೆಗೆ ಪರಿಸರದ ಮೇಲೆ ಬೀರುವ ನಕಾರಾತ್ಮಕ ಪರಿಣಾಮವನ್ನು ತಡೆಗಟ್ಟಿದಂತಾಗುತ್ತದೆ. ಅಲ್ಲದೆ, ಸಂಗ್ರಹಿಸಲಾದ ಪೂಜಾ ಸಾಮಗ್ರಿಗಳನ್ನು ಪರಿಸರಸ್ನೇಹಿ ರೀತಿಯಲ್ಲೂ ವಿಲೇವಾರಿ ಮಾಡಬಹುದಾಗಿದೆ.

ಪರಿಸರದ ಪ್ರತಿ ಅಂಶವನ್ನು ಪವಿತ್ರವೆಂದು ನಂಬುವ ನಮ್ಮ ಸಂಸ್ಕೃತಿಗೆ ತಕ್ಕ ರೀತಿಯಲ್ಲಿ, ಪೌರಾಡಳಿತ ಈ ಸಂಶೋಧನಾತ್ಮಕ ಕ್ರಮವನ್ನು ಜಾರಿಗೆ ತಂದಿರುವುದು ಶ್ಲಾಘನೀಯ. ಈ ಪರಿಕಲ್ಪನೆಯನ್ನು ಇತರ ನಗರಗಳು, ಊರುಗಳು ಹಾಗೂ ದೇವಸ್ಥಾನಗಳಲ್ಲಿಯೂ ಅಳವಡಿಸಿಕೊಂಡರೆ, ನಮ್ಮ ನದಿಗಳು ಶುಚಿಯಾಗಿ ಉಳಿಯುವುದರ ಜೊತೆಗೆ, ಪೂಜೆ ಮಾಡಿದ ವಸ್ತುಗಳ ಗೌರವವನ್ನೂ ಕಾಪಾಡಿದಂತಾಗುತ್ತದೆ.

—ಜಿ. ಪದ್ಮಾ, ಸಂಡೂರು

# ವೃಷಭಾರೂಢ ಶಿವಪಾರ್ವತಿ

ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿ ಸುಮಾರು 50ಕ್ಕೂ ಹೆಚ್ಚಿನ ದೇವಾಲಯಗಳಿದ್ದು, ಇವುಗಳಲ್ಲಿ ವಿಶೇಷವಾಗಿರುವುದು ಸ್ವಯಂಭೂ ಸೋಮೇಶ್ವರ ದೇವಾಲಯ. ನಾವು ನೋಡಿರುವ ಹೆಚ್ಚಿನ ದೇವಾಲಯಗಳಲ್ಲಿ ಶಿವನು ಲಿಂಗರೂಪಿ ಆಗಿದ್ದರೆ, ಇಲ್ಲಿ ಶಿವನು ವೃಷಭಾರೂಢನಾಗಿ ಪಾರ್ವತಿಯೊಂದಿಗಿರುವುದು ವಿಶೇಷ. ಪೂರ್ವ, ಉತ್ತರ ಹಾಗೂ ದಕ್ಷಿಣಕ್ಕೆ ಮೂರು ಮುಖ್ಯ ದ್ವಾರಗಳನ್ನು ಹೊಂದಿರುವ ಈ ದೇವಾಲಯದ ಸಂಕೀರ್ಣವು ಎತ್ತರದ ಗೋಡೆಗಳಿಂದ ಆವೃತವಾಗಿದೆ. ಇದು ಚಾಲುಕ್ಯ ವಾಸ್ತುಶಿಲ್ಪದ ಅದ್ಭುತ ಮಾದರಿಯಾಗಿದೆ. ದೇವಾಲಯದ ಸಂಕೀರ್ಣದ ಮಧ್ಯದಲ್ಲಿ, ಸೋಮೇಶ್ವರ ದೇವಾಲಯವಿದೆ.

—ಸೌಮ್ಯಾ ಶಿಗ್ಗಾಂವಕರ್, ಹಾಸನ

